<u>ಸಿ.ಸಿ .ನಂ. 24/2023</u> <u>ಪಿಡಬ್ಲೂಃ 1</u>

<u>ದಿನಾಂಕಃ 12-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಿ ಜಿ ಎನ್ ವಕೀಲರಿಂದಃ</u>**

3. ನಾನು ಕಳೆದ 33 ವರ್ಷಗಳಿಂದ ಫಿರ್ಯಾದಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಸಾಲದ ವ್ಯವಹಾರ ನಡೆದಾಗ ನಾನು ಫಿರಾದಿ ಸಂಸ್ಥೆಯಲ್ಲಿ ವ್ಯವಸ್ಥಾಪಕನಾಗಿರಲಿಲ್ಲ ಎಂದರೆ ಸರಿ . ಆಗ ಯಾವ ಯಾವ ಜಾಮೀನುದಾರರನ್ನು ಕೊಟ್ಟಿದ್ದಾರೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಲ ಕೊಡಬೇಕಾದರೆ ಸಾಲದ ಕರಾರು, ಡಿಮಾಂಡ ಪ್ರಾಮಿಸರಿ ನೋಟ್ ಪಡೆದುಕೊಂಡಿದ್ದೇವೆ . ಇವುಗಳನ್ನು ಹೊರತು ಪಡಿಸಿ ಬೇರೆ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಸಾಲ ವಸೂಲಿಗೆ ಹೋದಾಗ ದಿಃ 18-05-2019 ರಂದು ಚೆಕ್ ನ್ನು ಕೊಟ್ಟಿರುತ್ತಾರೆ . ಸಾಲ ವಸೂಲಿಗೆ ಮನೆಗೆ ಹೋದಾಗ ಚೆಕ್ ನ್ನು ಕೊಟ್ಟಿರುತ್ತಾರೆ . ಸಾಕ್ಷಿ ಮುಂದುವರೆದು ಸಂಘಕೆಕ ಬಂದು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ . ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿದರೆ ಏನಾಗುತ್ತದೆ ಗೊತ್ತಿದೆ . ಆರೋಪಿ ಕೊಟ್ಟ ಚೆಕ್ ನ್ನು ಪಡೆದುಕೊಂಡ ನಂತರ ಅವರಿಗೆ ನಾವು ಸ್ವೀಕೃತಿಯನ್ನು ಕೊಟ್ಟಿರುವುದಿಲ್ಲ. ಆ ದಿನ ನಾವು ಒಂದು ಚೆಕ್ ನ್ನು ಮಾತ್ರ ಪಡೆದುಕೊಂಡಿರುತ್ತೇವೆ.

4. ಲೊನ್ ಪಾಸ್ ಆಗಬೇಕಾದರೆ ಮಿಟಿಂಗ್ ನಲ್ಲಿ ಪಾಸ ಆಗಬೇಕಾಗುತ್ತದೆ ಎಂದರೆ ಸರಿ . ಲೋನ್ ಸೆಂಕ್ಷನ್ ಆದ ಬಗ್ಗೆ ಹೆಡ್ ಆಫೀಸ್ ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಹೆಡ್ ಆಫೀಸ್ ನವರೇ ಲೋನ್ ಕೊಟ್ಟರುತ್ತಾರೆ ಎಂದು ನುಡಿದಿರುತ್ತಾರೆ . ಸಾಲದ ಕರಾರು ಪತ್ರ ಒಂದು ಲಕ್ಷ ರುಪಾಯಿಗೆ ಇದೆ ಎಂದರೆ ಸರಿ . ನಾವು 1,49,000/- ರೂ.ಗಳಿಗೆ ಚೆಕ್ ನ್ನು ಹಾಕಿದ್ದೇವೆ ಎಂದರೆ ಸರಿ . ಸಾಕ್ಷಿ ಅವರು ಸಾಲ ಜಮಾ ತೆಗೆದುಕೊಳ್ಳಿ ಎಂದು ಚೆಕ್ ನ್ನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ . ಆ ಅವಧಿಗೆ 49 ಸಾವಿರ ರೂಪಾಯಿ ಬಡ್ಡಿ ಆಗಿತ್ತು . ಎಷ್ಟು ಪರ್ಸೆಂಟ್ ಬಡ್ಡಿ ಕೆಲ್ಕುಲೇಟ್ ಮಾಡಿದ್ದು ದಾಖಲಾತಿ ನೋಡಿ

ಹೇಳಬೇಕು . ಸಾಕ್ಷಿ ದಾಖಲಾತಿಯನ್ನು ನೋಡಿ 15% ಬಡ್ಡಿ ಆಕರಣೆ ಮಾಡಿದ್ದೇವೆ ಎಂದು ನುಡಿದಿರುತ್ತಾರೆ . ದಿಃ 18-05-2019 ರಂದು ಚೆಕ್ ನ್ನು ನೀಡಿರುತ್ತಾರೆ . ಯಾವ ದಿನಾಂಕದಿಂದ ಚೆಕ್ ಕೊಟ್ಟ ದಿನಾಂಕದವರೆಗೆ ಬಡ್ಡಿ ಕೆಲ್ಕುಲೇಶನ್ ಮಾಡಿದ್ದೇವೆ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಕ್ಷಿ ಸಾಲ ಪಡೆದ ದಿನಾಂಕದಿಂದ ಚೆಕ್ ನೀಡಿದ ದಿನಾಂಕದವರೆಗೆ ಬಡ್ಡಿಯನ್ನು ಆಕರಣೆ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ . ಸಾಲ ಮಂಜೂರಾದ ನಂತರ ಎಷ್ಟು ಬಡ್ಡಿ ಆಕರಣೆ ಮಾಡಿದ್ದೇವೆ , ಯಾವ ತಿಂಗಳಿನಿಂದ ಯಾವ ತಿಂಗಳವರೆಗೆ ಎಷ್ಟು ಬಡ್ಡಿ ಬಾಕಿ ಇದೆ , ಆ ಬಗ್ಗೆ ರಜಿಸ್ಟರ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ರಜಿಸ್ಟರ್ ಇಲ್ಲ . ಸಾಲದ ಖಾತೆ ನಿಪಿ-15 ನ್ನು ನೋಡಿ ಬಡ್ಡಿಯನ್ನು ಆಕರಣೆ ಮಾಡಲಾಗಿದೆ . ನಾವು ಹಾಜರು ಪಡಿಸಿದ ನಿಪಿ-15 ಖಾತಾ ಉತಾರನಲ್ಲಿ ಯಾವುದೇ ಡಿಟೆಲ್ ಲೆಕ್ಕಾಚಾರ ಇಲ್ಲ ಎಂದರೆ ಸರಿ . ಆರೋಪಿ ಬಿಸಿನೆಸ ಮಾಡುತ್ತಾರೆ , ಟಿಪ್ಪರ ಡ್ರೈವರ್ ಇದ್ದಾರೆ ಅದನ್ನು ನೋಡಿಕೊಂಡು ಸಾಲವನ್ನು ಕೊಟ್ಟಿರುತ್ತೇವೆ. ಟಿಪ್ಪರ ಡ್ರೈವರ್ ಗೆ ಸಾದಾರಣ 10 ಸಾವಿರ ರೂಪಾಯಿ ಸ್ಯಾಲರಿ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಮಾಲೀಕರ ಬಳಿ ಸ್ಯಾಲರಿ ಸ್ಲಿಪ್ ನ್ನು ತರಿಸಿಲ್ಲ. ಈಗಿನ ದಿನಮಾನದ ಆಧಾರದ ಮೇಲೆ ಅವರಿಗೆ 10 ಸಾವಿರ ರುಪಾಯಿಗಿಂತ ಜಾಸ್ತಿ ಇದೆ ಎಂದು ಹೇಳಿದ್ದೇನೆ . ಎಲ್ಲಾ ಚಾಲಕರಿಗೆ ಒಂದೇ ರೀತಿಯ ಸ್ಯಾಲರಿ ಇರುವುದಿಲ್ಲ ಹೆಚ್ಚು ಕಡಿಮೆ ಇರುತ್ತದೆ ಎಂದರೆ ಸರಿ . ಆರೋಪಿ ರೆತಿ ಬಿಸಿನೆಸ್ ಮಾಡುತ್ತಾರೆ . ಆರೋಪಿ ಸದರಿ ಬಿಸಿನೆಸ್ ಮಾಡುತ್ತಾರೆ ಎಂದರು ದಾಖಲಾತಿ ಪಡೆಯುವ ಅವಶ್ಯಕತೆ ಇರುವುದಿಲ್ಲ. ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಸಾಲ ನೀಡುವಾಗ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ ಇದು ಕೃಷಿಯೇತರ ಮಾಧ್ಯಮಿಕ ಸಾಲ ಎಂದು ನುಡಿದಿರುತ್ತಾರೆ . ಅವಶ್ಯಕತೆ ಇಲ್ಲದ ಕಾರಣ ಅವರು ಸಾಲವನ್ನು ಯಾವ ಉದ್ದೇಶಕ್ಕೆ ಉಪಯೋಗಿಸಿಕೊಂಡಿರುತ್ತಾರೆ ಕೇಳಿರುವುದಿಲ್ಲ . ಆರೋಪಿ ಎಷ್ಟು ಸಾಲ ಕಟ್ಟಿದ್ದಾರೆ ದಾಖಲಾತಿ ನೋಡಿ ಹೇಳಬೇಕು . ಪ್ರಕರಣ ದಾಖಲಿಸುವ ಪೂರ್ವದಲ್ಲಿ ಹಾಗೂ ಈ ದಿನ ಪಾಟೀ ಸವಾಲಿಗೆ ಬರುವ ಪೂರ್ವದಲ್ಲಿ ಈವರೆಗೂ ಎಷ್ಟು ಪೆಮೆಂಟ್ ಆಗಿದೆ ಆ ಬಗ್ಗೆ ದಾಖಲಾತಿ ತೆಗೆದುಕೊಂಡು ಬರಬಹುದಿತ್ತು

ಎಂದರೆ ಸಾಕ್ಷಿ ಅವಶ್ಯಕತೆ ಬಿದ್ದರೆ ಪೂರೈಸುತ್ತೇವೆ ಎಂದು ನುಡಿದಿರುತ್ತಾರೆ . ಅಂದಾಜು ಎಷ್ಟು ಪೆಮೆಂಟ್ ಆಗಿದೆ ದಾಖಲಾತಿ ನೋಡಿ ಹೇಳಬೇಕು . ಇಂದಿನವರೆಗೆ ಆರೋಪಿ 70 ಸಾವಿರ ರೂಪಾಯಿ ನಮ್ಮ ಸೊಸೈಟಿಗೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು . ಸಾಲ ಕಟಬಾಕಿಯಾದ ನಂತರ ಆರೋಪಿಗೆ ಸುಮಾರು 20-25 ನೋಟಿಸನ್ನು ಕೊಟ್ಟಿದ್ದೇವೆ . ಆ ನೋಟಿಸುಗಳನ್ನು ನ್ಯಾಯಾಲಯದ ಕಡತದಲ್ಲಿ ಇಲ್ಲ . ನಾವು ಆರೋಪಿಗೆ ಯಾವುದೇ ಸಾಲವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ . ಆರೋಪಿ ಮೊದಲು ಪಡೆದಿರುವ ಸಾಲವನ್ನು ಚುಕ್ತಾ ಮಾಡಿದ್ದರೂ ಅದನ್ನು ಮುಕ್ತಾಯಗೊಳಿಸದೇ ಮತ್ತು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಈ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈಗಾಗಲೇ ಆರೋಪಿ ಸಾಲ ಚುಕ್ತಾ ಮಾಡಿದ್ದು ಮತ್ತು ಬರಬೇಕು ಎಂದು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಸಂಘಕ್ಕೆ ಯಾವುದೇ ಬಾಕಿ ಹಣವನ್ನು ಕೊಡುವುದು ಇರುವುದಿಲ್ಲ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಮತ್ತೇ ಹಣ ಬರಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.